## ಕವಿತೆ



ಸ್ಮಿತಾ ಅಮೃತರಾಜ್
ಕಲೆ: ಕೌಶಿಕ್

# ದಾಖಲಾಗದ ಕಡತಗಳು



ಹಗಲು ಸವೆಯುತ್ತದೆ
ಇರುಳು ನೋಯುತ್ತದೆ
ದಿನದ ಕಡತಗಳೊಳಗೆ
ದಾಖಲಾಗಿಸದೆಯೂ ಅವಳ
ದಿನಚರಿಯೊಂದು ಮುಗಿಯುತ್ತದೆ.

ಹಗಲಿಗೆ ಚುರುಕು ಮುಟ್ಟುವುದು
ಇವಳ ನಡಿಗೆಯಿಂದಲೋ ಎಂಬಂತೆ
ದಾಪುಗಾಲು ಹಾಕುತ್ತದೆ
ಇವಳು ಬಸವಳಿಯುವ ಹೊತ್ತಲ್ಲಿ
ಹಗಲೂ ದಣಿದು ಕೂರುತ್ತದೆ.

ಆ ಹೊತ್ತು ಅವರಿಬ್ಬರು
ಮುಖಾಮುಖಿಯಾಗುತ್ತಾರೆ
ಕಷ್ಟಸುಖ ಹಂಚಿಕೊಳ್ಳುತ್ತಾರೆ
ಆಯಾಸದ ಕಾಲು ಚಾಚಿಕೊಳ್ಳುತ್ತವೆ
ರಾತ್ರಿಯ ಬೆರಳಿನ ನೆರಳೊಂದು ಅವಳ
ಕಾಲು ನೀವಿ ಸಂತೈಸುತ್ತದೆ.

ನಿರುಮ್ಮಳ ಭಾವವೊಂದು
ಒಳ ಕೋಣೆ ದಾಟಿ ಜಿಗಿಯುತ್ತದೆ
ಪದವೊಂದು ಹಾರಿ
ಆಕಾಶಕ್ಕಂಟಿಕೊಳ್ಳುತ್ತದೆ

ನಡುರಾತ್ರಿಯ ನೀರವದಲ್ಲಿ
ಕೇಳಿಸಿದ ಇನಿದನಿ,
ಬೆಳಕು ಹರಿದ ಮೇಲೂ ಉಳಿದ
ನಭದ ಮಿನುಗು,
ಕಂಡೂ ಕಾಣದ
ಅಸಡ್ಡೆ ತೋರುತ್ತಾರೆ.

ಬಿಟ್ಟ ನಿಟ್ಟುಸಿರೊಂದು ಆಲಾಪಗೈದು
ಜಗವ ತೂಗುವುದು
ಜಿಗಿದ ಪದವೊಂದು ನಕ್ಷತ್ರವಾಗಿ
ಬೆಳಕ ಕಟ್ಟುವುದು ಎಂದರೆ
ಸಂದೇಹದಿಂದಲೇ ಪ್ರಶ್ನಿಸುತ್ತಾರೆ.

ಪರಿಮಳದ ಜಾಡು ಹಿಡಿದು
ಹಟಕ್ಕೆ ಬಿದ್ದು ಜಾಲಾಡಿದರೆ
ನಮ್ಮ ಹಿತ್ತಲ ಹೂವಿಗೆ ಗಂಧವಿಲ್ಲವೆಂದು
ಹಾರಿಕೆಯ ಉತ್ತರವೂ ಸಿಗುತ್ತದೆ.

ಹೂ ಅರಳಿ, ಹಕ್ಕಿ ಉಲಿದು
ನದಿ ಹಾಡಿ, ನಕ್ಷತ್ರ ಹುಟ್ಟಿ
ಚಿಟ್ಟೆಯೊಂದು ಎದೆಯ ನಡುವಲ್ಲಿ
ರೆಕ್ಕೆ ಪಟಪಟಿಸುವಾಗ
ಒಲವು ದಾಖಲಾಗದೆಯೂ
ಕಳೆಗಟ್ಟುವುದು ಲೋಕ.

